**ಸಿವಿಲ್ ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸುರಪುರ**
**ಸಾಃಸುರಪುರ**

| | |
|---|---|
| ಸಿ.ಸಿ | 171/2020 |
| ಸಿ.ಡಬ್ಲ್ಯೂ 3 | ಪಿ.ಡಬ್ಲ್ಯೂ 2 |
| ದಿನಾಂಕ | 17-02-2024 |

**ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

| | |
|---|---|
| **ಹೆಸರು** | ಭೀಮಯ |
| **ತಂದೆ/ತಾಯಿ/ಗಂಡನ ಹೆಸರು** | ಸುಭಾಷ |
| **ವಯಸ್ಸು** | 28 ವರ್ಷ |
| **ಉದ್ಯೋಗ** | ಚಾಲಕ |
| **ವಾಸ** | ಕಲ್ಲದೇವನಹಳ್ಳಿ |

**ಮುಖ್ಯವಿಚಾರಣೆಃ ಶ್ರೀ ಎಪಿಪಿ ರವರಿಂದ**

ಚಾಸಾ1 ಮತ್ತು 2 ರವರ ಪರಿಚಯ ಇಲ್ಲ. ಸುಮಾರು ನಾಲ್ಕುವರೆ ವರ್ಷಗಳ ಹಿಂದೆಒಂದು ದಿನ ಸುರಪುರ ಪೋಲೀಸ ಠಾಣೆಯಲ್ಲಿ ಪೋಲೀಸರ ಕೋರಿಕೆಯ ಮೇರೆಗೆ ಒಂದು ದಾಖಲೆ ಮೇಲ ಸಹಿ ಮಾಡಿದ್ದೇನೆ. ಸಾಕ್ಷಿ ತನ್ನ ಸಹಿ ಇರುವ ದಾಖಲೆಯನ್ನು ನೋಡಿ ಗುರುತಿಸಿದ್ದು ಅದು ಜಪ್ತು ಪಂಚನಾಮೆ ಇದ್ದು, ಅದನ್ನು ಈಗಾಗಲೇ ನಿಪಿ 1 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ 1(ಬಿ) ಎಂದು ಗುರುತಿಸಲಾಯಿತು. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಯಾವುದೇ ಮುದ್ದೆಮಾಲುಗಳನ್ನು ಜಪ್ತುಪಡಿಸಿಕೊಂಡಿಲ್ಲ ಎಂದು ನುಡಿಯುತ್ತಾರೆ. ಮುದ್ದೇಮಾಲಿನ ಮೇಲೆ ಇರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಒಂದು ಬಿಯರ ಬಾಟಲು ಮತ್ತು ಓರಿಜಿನಲ್ಸ ಚಾಯ್ಸ ಡಿಲಕ್ಸ ವಿಸ್ಕಿಯ ಪೌಚನ್ನು ಮುದ್ದೆಮಾಲು 1 ಮತ್ತು 2 ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಮು.ಮಾ 1(ಎ) ಮತ್ತು 2(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಸದರಿ ಮುದ್ದೇಮಾಲುಗಳ ಮೇಲೆ ಎಲ್ಲಿ ಸಹಿ ಪಡೆದುಕೊಂಡಿದ್ದಾರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶ ಕೇಳಿದ್ದರಿಂದ ಅವಕಾಶ ನೀಡಲಾಯಿತು)**

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದ**

ದಿನಾಂಕ 24-03-2019 ರಂದು ಬೆಳಿಗ್ಗೆ 9 ಗಂಟೆ ಸುಮಾರಿಗೆ ಚಾಸಾ 1 ರವರು ನನ್ನನ್ನು ಹಾಗೂ ಚಾಸಾ 2 ರವರನ್ನು ಅಬಕಾರಿ ದಾಳಿಗೆಂದು ಶಾಂತಾಪೂರ ಕ್ರಾಸ ಹತ್ತಿರ ರೋಡಿನ ಪಕ್ಕದಲ್ಲಿ ಆರೋಪಿತನಾದ ರತ್ನಯ್ಯ ತಂದೆ ರಂಗಯ್ಯ ಗುತ್ತೆದಾರ ಯಾವುದೇ ಪರವಾನಿಗೆ ಇಲ್ಲದೇ ಅಕ್ರಮವಾಗಿ ಮದವನ್ನು ಸಂಗ್ರಹಿಸಿ ಸಾರ್ವಜನಿಕರಿಗೆ ಮಾರಾಟ ಮಾಡುತ್ತಿರುವಾಗ ಚಾಸಾ 1 ರವರು ನನ್ನ ಹಾಗೂ ಚಾಸಾ 2 ರವರ ಸಮಕ್ಷಮ ದಾಳಿ ಮಾಡಿದಾಗ ಆರೋಪಿ ಓಡಿ ಹೋಗಿರುತ್ತಾನೆ ಎಂದರೆ ಸರಿಯಲ್ಲ. ನಂತರ ಆರೋಪಿ ಬಿಟ್ಟು ಹೋದ ಓರಿಜಿನಲ ಚಾಯ್ಸ ಡಿಲಕ್ಸ ವಿಸ್ಕಿಯ 90 ಎಂ.ಎಲನ 35 ಪೌಚಗಳನ್ನು ಹಾಗೂ 650 ಎಂ.ಎಲನ 10 ಕಿಂಗ್ ಫಿಶರ ಸ್ಟ್ರಾಂಗ ಬಿಯರ ಬಾಟಲುಗಳನ್ನು ನನ್ನ ಹಾಗೂ ಚಾಸಾ 2 ರವರ ಸಮಕ್ಷಮ ನಿಪಿ 1 ರಂತೆ ಸ್ಥಳದಲ್ಲಿ ಪಂಚನಾಮೆ ಮಾಡಿ ಅದರ ಮೇಲೆ ನನ್ನ ಸಹಿ ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಜಪ್ತು ಪಡಿಸಿಕೊಂಡ ಮು.ಮಾಲಿನಿಂದ ಒಂದು ಓರಿಜಿನಲ ಚಾಯ್ಸ ವಿಸ್ಕಿಯ ಪೌಚ ಮತ್ತು ಒಂದು ಕಿಂಗ್ ಫಿಶರ ಬಿಯರ ಬಾಟಲನ್ನು ರಾಸಾಯನಿಕ ವಿಶ್ಲೇಷಣೆಗಾಗಿ ಮಾದರಿ ಎಂದು ಪ್ರತ್ಯೇಕಿಸಿ ಅದರ ಮೇಲೆ ನನ್ನ ಹಾಗೂ ಚಾಸಾ 2 ರವರ ಸಹಿವುಳ್ಳ ಚೀಟಿಯನ್ನು ಅಂಟಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮುದ್ದೇಮಾಲುಗಳು ನ್ಯಾಯಾಲಯದ ಮುದ್ದೆ ಇರುವ ಮು.ಮಾಲುಗಳು ಆಗಿರುತ್ತವೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು ನನ್ನ ಹಾಗೂ ಚಾಸಾ 2 ರವರ ಸಮಕ್ಷಮ ರಾತ್ರಿ 9 ರಿಂದ 10 ರವರೆಗೆ ಸ್ಥಳದಲ್ಲಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಎಲ್ಲಾ ವಿಷಯ ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ.ಎ.ಕೆ ನ್ಯಾಯವಾದಿಗಳಿಂದ.**

ಯಾವುದೇ ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

**ಮರು ವಿಚಾರಣೆಃ ಇಲ್ಲ**

**(ಸಾಕ್ಷಿಯ ಹೇಳಿಕೆಯನ್ನು ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮುಖಾಂತರ ಬೆರಳಚ್ಚು ಮಾಡಿಸಿ ಸಾಕ್ಷಿದಾರರಿಗೆ ಓದಿ ಹೇಳಲಾಯಿತು)**

**ಓ.ಹೇ.ಕೇ.ಸರಿ ಇದೆ.**

**ಸಿವಿಲ್ ಹಾಗೂ ಪ್ರಥಮ**
**ದರ್ಜೆ ನ್ಯಾಯಿಕ ದಂಡಾಧಿಕಾರಿಗಳ**
**ನ್ಯಾಯಾಲಯ, ಸುರಪೂರ**